ಕ್ರ. ಸಂ: 14

ಕರ್ನಾಟಕ ಸರ್ಕಾರ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.

ಸಂಖ್ಯೆ:ಸಿಡಬ್ಲ್ಯೂಬಿ/ಆರ್‌ಇಪಿ/ಸಿಐಆರ್/ಸಿಆರ್-01/14-15

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ,
ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-560029
ದಿನಾಂಕ: 05-12-2014.

## ತಿದ್ದುಪಡಿ

ವಿಷಯ: ಫಲಾನುಭವಿಗಳಿಗೆ ಮದುವೆಯ ಧನಸಹಾಯ ಮಂಜೂರಾತಿಗಾಗಿ ಸಲ್ಲಿಸುವ ಅರ್ಜಿಗಳ ಕಾಲಮಿತಿಯನ್ನು ಪರಿಷ್ಕರಿಸಿರುವ ಬಗ್ಗೆ.

ಉಲ್ಲೇಖ: 1. ಮಂಡಳಿಯ ಸುತ್ತೋಲೆ ಸಂಖ್ಯೆ: ಸಿಡಬ್ಲ್ಯೂಬಿ/ ಆರ್‌ಇಪಿ/ ಸಿಐಆರ್/ ಸಿಆರ್-01/13-14. ದಿನಾಂಕ: 15-07-2014.
2. ಈ ಕಛೇರಿಯ ಸಮ ಸಂಖ್ಯೆಯಿರುವ ಪತ್ರ ದಿನಾಂಕ: 10-11-2014.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ 2ರ ಸುತ್ತೋಲೆಯಲ್ಲಿ ವಿವಿಧ ಯೋಜನೆಗಳ ಕ್ಲೈಮ್ ಅರ್ಜಿಗಳನ್ನು ವಿಲೇಮಾಡುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ದಾಖಲಾತಿ ಸಮೇತ ಅರ್ಜಿ ಸಲ್ಲಿಸಲು ಸಮಯ ನಿಗಧಿಪಡಿಸಲಾಗಿತ್ತು.

ಮದುವೆ ಸಹಾಯಧನ ಮಂಜೂರಾತಿ ಕೋರುವ ಕ್ಲೈಮ್ ಅರ್ಜಿಗಳ ಸಲ್ಲಿಸುವಿಕೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುವ ವಿಷಯವನ್ನು ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು/ ಕಾರ್ಮಿಕ ಅಧಿಕಾರಿಗಳು/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರ/ಮಂಡಳಿಯ ಎಕ್ಸಿಕ್ಯೂಟಿವ್ಸ್ ಇವರುಗಳ ಗಮನಕ್ಕೆ ತರಲಾಗಿದೆ.

**"ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆ ಧನಸಹಾಯ ಪಡೆಯಲು ತಮ್ಮ ಕಾರ್ಯವ್ಯಾಪ್ತಿಯ ಉಪನೋಂದಣಾಧಿಕಾರಿಯವರಿಂದ ವಿವಾಹ ನೋಂದಣಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಇತರೆ ದಾಖಲಾತಿಗಳೊಂದಿಗೆ ಮದುವೆಯಾದ ದಿನಾಂಕದಿಂದ ಆರು ತಿಂಗಳೊಳಗಾಗಿ ಅರ್ಜಿಯನ್ನು ಸಂಬಂಧಿಸಿದ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರುಗಳ ಕಛೇರಿಗೆ ಮುಂದಿನ ಪರಿಶೀಲನಾ ವರದಿಗೆ ಸಲ್ಲಿಸತಕ್ಕದು".**

ಮೇಲ್ಕಾಣಿಸಿದ ಆದೇಶವು ದಿನಾಂಕ: 15-07-2014 ರಿಂದಲೇ ಜಾರಿಗೆ ಬರುತ್ತದೆ.

ಜಂಟಿ ಕಾರ್ಯದರ್ಶಿ.

ಗೆ,

1. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು
2. ಎಲ್ಲಾ ಕಾರ್ಮಿಕ ಅಧಿಕಾರಿಗಳು
3. ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರುಗಳು

ಪ್ರತಿಯನ್ನು: ಎಲ್ಲಾ ಉಪ ಕಾರ್ಮಿಕ ಆಯುಕ್ತರಿಗೆ ಮಾಹಿತಿಗಾಗಿ ಕಳುಹಿಸಿದೆ.
ಕಾರ್ಮಿಕ ಸಂಘಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯವರ ಮಾಹಿತಿಗಾಗಿ ಕಳುಹಿಸಿದೆ.